# ಯಶ್ ಯಶೋಗಾಥೆ!



**ಜ. 8ಕ್ಕೆ ಯಶ್‌ಗೆ 36ನೇ ಜನ್ಮದಿನ. ಅಪಾರ ಜನಪ್ರಿಯತೆಯನ್ನೂ ಹಣವನ್ನೂ ಬೇಡಿಕೆಯನ್ನೂ ಗಳಿಸಿಕೊಂಡ ಅವರ ವೃತ್ತಿಬದುಕಿನ ಕುರಿತ ಒಂದು ಟಿಪ್ಪಣಿ ಇಲ್ಲಿದೆ.**

**■ ಪದ್ಮನಾಭ ಭಟ್**

‘ನಂದಗೋಕುಲ’, ‘ಮಳೆಬಿಲ್ಲು’, ‘ಪ್ರೀತಿ ಇಲ್ಲದ ಮೇಲೆ’ದಂಥ ಕಿರುತೆರೆ ಧಾರಾವಾಹಿಗಳಲ್ಲಿ ಕಾಣಿಸಿಕೊಂಡ ಕುಡಿಮೀಸೆಯ ಹುಡುಗನ ನೆನಪು ಬಹುತೇಕರಿಗೆ ಇನ್ನೂ ಮಾಸಿರಲಿಕ್ಕಿಲ್ಲ. ಅಂದು ಧಾರಾವಾಹಿಯ ಪುಟ್ಟ ಪಾತ್ರಗಳಲ್ಲಿಯೂ ಲವಲವಿಕೆಯಿಂದ ನಟಿಸಿದ ಆ ಹುಡುಗನ ಚಿತ್ರದ ಪಕ್ಕ ಮೊನ್ನೆಯಷ್ಟೇ ಬಿಡುಗಡೆಯಾದ ‘ಕೆ.ಜಿ.ಎಫ್. 2’ ಸಿನಿಮಾದ ಪೋಸ್ಟರ್‌ನಲ್ಲಿನ ಕಿಡಿನೋಟದ ಹುಡುಗನ ಚಿತ್ರವನ್ನು ಇಟ್ಟು ನೋಡಿದರೆ ಅರಗಿಸಿಕೊಳ್ಳುವುದೂ ಅಷ್ಟೇ ಕಷ್ಟವಾದೀತು.

ನಟ ಯಶ್ ಸಿನಿಮಾ ಜರ್ನಿಯೇ ಹಾಗಿದೆ. ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮಗನೊಬ್ಬ ಬಾಲಿವುಡ್ ಭದ್ರಕೋಟೆಗೆ ನುಗ್ಗಿ ಗೆಲುವಿನ ಪುಷ್ಪವನ್ನು ಹೊತ್ತು ತರುವಷ್ಟು ಬೆಳೆಯುತ್ತಾನೆ ಎಂದು ಊಹಿಸುವುದೂ ಕಷ್ಟವೇ. ಆ ಊಹೆ ನಿಜವಾಗಿದ್ದರಲ್ಲಿ ಯಶ್ ಅದೃಷ್ಟವೂ ಕೆಲಮಟ್ಟಿಗೆ ಕೆಲಸ ಮಾಡಿರಬಹುದು. ಆದರೆ ಖಂಡಿತ ಅವರು ಅದೃಷ್ಟವನ್ನೇ ನಂಬಿಕೊಂಡು ಉಳಿದವರಲ್ಲ, ಅವಕಾಶಗಳ ಬೆನ್ನುಹತ್ತಿ ಹಿಡಿದು ತಮ್ಮ ಕನಸುಗಳನ್ನು ಹಂತಹಂತವಾಗಿ ನನಸಾಗಿಸಿಕೊಳ್ಳುತ್ತ ಬೆಳೆದವರು. 2007ರಲ್ಲಿ ‘ಜಂಬದ ಹುಡುಗಿ’ ಸಿನಿಮಾದಲ್ಲಿ ಸಣ್ಣ ಪಾತ್ರವೊಂದರಲ್ಲಿ ಕಾಣಿಸಿಕೊಂಡ ಅವರು, ತಮ್ಮ ಎರಡನೇ ಸಿನಿಮಾ ‘ಮೊಗ್ಗಿನ ಮನಸ್ಸು’ನಲ್ಲಿನ ನಟನೆಗಾಗಿ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದುಕೊಂಡಿದ್ದು ಖಂಡಿತ ಅದೃಷ್ಟದ ಬಾಬತ್ತಲ್ಲ.

ನಂತರ ‘ಕಳ್ಳರ ಸಂತೆ’, ‘ರಾಜಧಾನಿ’ಯಂಥ ಸಿನಿಮಾಗಳಲ್ಲಿ ನಟಿಸಿದರೂ ಅವರಿಗೆ ಗುರ್ತಿಸಿಕೊಳ್ಳುವಂಥ ಗೆಲುವು ತಂದುಕೊಟ್ಟಿದ್ದು ‘ಕಿರಾತಕ’ ಮತ್ತು ‘ಡ್ರಾಮಾ’.

2014ರಲ್ಲಿ ಸಂತೋಷ್ ಆನಂದ್‌ರಾಮ್ ನಿರ್ದೇಶನದ ‘ಮಿಸ್ಟರ್ ಆ್ಯಂಡ್ ಮಿಸಸ್ ರಾಮಾಚಾರಿ’ ಸಿನಿಮಾ, ಯಶ್ ಬದುಕಿನಲ್ಲಷ್ಟೇ ಅಲ್ಲ, ಕನ್ನಡ ಚಿತ್ರರಂಗದ ಇತಿಹಾಸದಲ್ಲಿಯೂ ಹಲವು ಮೈಲಿಗಲ್ಲುಗಳನ್ನು ನೆಟ್ಟ ಸಿನಿಮಾ. ರಾಮಾಚಾರಿಯ ಅಭೂತಪೂರ್ವ ಗೆಲುವು ಯಶ್ ಬಣ್ಣದ ಬದುಕಿನ ದೆಸೆಯನ್ನೇ ಬದಲಿಸಿಬಿಟ್ಟಿತು. ಈ ದೆಸೆ ದಶದಿಕ್ಕುಗಳಿಗೂ ವ್ಯಾಪಿಸಿದ್ದು ಪ್ರಶಾಂತ್ ನೀಲ್ ನಿರ್ದೇಶನದ ‘ಕೆಜಿಎಫ್’ ಸಿನಿಮಾ ಮೂಲಕ. ಪ್ಯಾನ್ ಇಂಡಿಯಾ ಸಿನಿಮಾ ಆಗಿ ಬಿಡುಗಡೆಯಾದ ‘ಕೆಜಿಎಫ್’ ಹಿಂದಿಯೂ ಸೇರಿದಂತೆ ತೆಲುಗು, ತಮಿಳಿನಲ್ಲಿಯೂ ದೊಡ್ಡ ಜಯಭೇರಿ ಬಾರಿಸಿದ್ದು ಈಗ ಇತಿಹಾಸ. ‘ಕೆಜಿಎಫ್ 2’ ಸಿನಿಮಾ ಕೂಡ ಬಿಡುಗಡೆಗೆ ಸಜ್ಜಾಗಿರುವುದು ಈಗಿನ ವರ್ತಮಾನ.

ನಟನೆಯ ಈ ಉನ್ನತ ಶಿಖರದಲ್ಲಿರುವಾಗಲೇ ಯಶ್ ಸಾಮಾಜಿಕ ಜವಾಬ್ದಾರಿಯ ಪಾತ್ರವನ್ನೂ ಸಮರ್ಥವಾಗಿ ನಿಭಾಯಿಸುವ ಮೂಲಕ ಗಮನಸೆಳೆದರು. ಕರ್ನಾಟಕದಲ್ಲಿ ಬರಗಾಲ ಆವರಿಸಿಕೊಂಡಾಗ ಒಂದು ತಂಡ ಕಟ್ಟಿಕೊಂಡು, ಹಲವು ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಟ್ಟಿದ್ದು, ಕೆರೆಗಳ ಪುನರ್‌ನಿರ್ಮಾಣಕ್ಕೆ ಕೈ ಹಾಕಿದ್ದು ಎಲ್ಲವೂ ಯಶ್‌ಗೆ ಹೊಸದೇ ವರ್ಚಸ್ಸನ್ನು ತಂದುಕೊಟ್ಟಿವೆ.

‘ನಂದಗೋಕುಲ’ ಧಾರಾವಾಹಿಯಿಂದ ಹಿಡಿದು, ಯಶ್ ಅವರ ಗೆಲುವಿನ ಗುರುತುಗಳಾದ ‘ಡ್ರಾಮಾ’, ‘ಮಿಸ್ಟರ್ ಆ್ಯಂಡ್ ಮಿಸಸ್ ರಾಮಾಚಾರಿ’ ಸಿನಿಮಾಗಳಲ್ಲಿಯೂ ಅವರ ಜೊತೆಗೆ ತೆರೆಯನ್ನು ಹಂಚಿಕೊಂಡ ರಾಧಿಕಾ ಪಂಡಿತ್ ಅವರ ಬದುಕಿನ ಭಾಗವೂ ಆಗಿದ್ದಾರೆ. ಅವರಿಬ್ಬರಿಗೀಗ ಇಬ್ಬರು ಮುದ್ದಾದ ಮಕ್ಕಳಿದ್ದಾರೆ.

36 ಚಿತ್ರನಟರ ಪಾಲಿಗೆ ಆತಂಕಪಡುವ ವಯಸ್ಸೇನಲ್ಲ. ಆದರೆ ತುಸು ಆತಂಕದಿಂದಲೂ ಅಷ್ಟೇ ಕುತೂಹಲದಿಂದಲೂ ಕೇಳಿಕೊಳ್ಳಬೇಕಾದ ಇನ್ನೊಂದು ಪ್ರಶ್ನೆಯಿದೆ. ಅದು, ಈಗಾಗಲೇ ಯಶಸ್ಸಿನ ತುತ್ತತುದಿಯಲ್ಲಿರುವ ಯಶ್, ಮುಂದೆ ಯಾವ ಸಿನಿಮಾದಲ್ಲಿ ನಟಿಸಲಿದ್ದಾರೆ? ಅದು ಅವರ ವೃತ್ತಿಬದುಕನ್ನು ಇನ್ನಷ್ಟು ಎತ್ತರಿಸಬಹುದೇ? ಈ ಪ್ರಶ್ನೆಗೆ ಕಾಲವಷ್ಟೇ ಉತ್ತರಿಸಬಹುದು. ಸದ್ಯಕ್ಕೆ ನಾವು ಹೇಳಬಹುದಾಗಿದ್ದು ಇಷ್ಟೆ: ಹ್ಯಾಪಿ ಬರ್ತ್‌ಡೇ ಯಶ್! ■




